# ಸ್ವಾಮಿ ಬೋಧಾನಂದ (೧೮೭೦-೧೯೫೦)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ** ಅನುವಾದ: **ಕುಮಾರಿ ಪಿ. ಉಷಾ**

ಭಾಗ ೨

ಗಿರೀಶಬಾಬುವಿಗೆ ನಿರಂಜನ ಮಹಾರಾಜರ ಮೇಲೆ ತುಂಬ ಭಕ್ತಿ. ನಿರಂಜನ ಮಹಾರಾಜರು ಗಿರೀಶಬಾಬುಗೆ ಸಂನ್ಯಾಸ ಪಡೆಯಲು ಬಹಳ ಒತ್ತಾಯಿಸಿದರು. ಗಿರೀಶರು ಶ್ರೀಮಾತೆಯವರ ಅನುಮತಿ ಪಡೆಯಲು ಅವರ ಊರಿಗೆ ಹೋದರು. ನಾನೂ ಅವರ ಜೊತೆಗಿದ್ದೆ. ಗಿರೀಶ ಬಾಬುರದು ಅದೆಂಥ ಭಕ್ತಿ! ಶ್ರೀಮಾತೆಯವರ ಹಳ್ಳಿಯ ಮೃತ್ತಿಕೆಯೂ ಅವರಿಗೆ ಪವಿತ್ರವಾಗಿತ್ತು! ಆ ಹಳ್ಳಿಯ ರೈತರನ್ನೊಡಗೂಡಿ ಎಲ್ಲರೂ ಧನ್ಯರೆಂಬ ಭಾವ ಅವರಿಗೆ. ಒಂದು ಸಾಯಂಕಾಲ ಅವರು ಶ್ರೀಮಾತೆಯವರನ್ನು ಭೇಟಿಯಾಗಲು ಹೋದರು. ಅಲ್ಲಿ ಅವರನ್ನು ಬಹುವಾಗಿ ಜರೆಯತೊಡಗಿದರು. ಧಡೂತಿ ಶರೀರ, ಸಾಲದ್ದಕ್ಕೆ ಥಿಯೇಟರಿನಲ್ಲಿ ನಟನೆ ಮಾಡುವ ಅಭ್ಯಾಸ ಬೇರೆ! ಅವರು ಅಲ್ಲೊಂದು ಗದ್ದಲದ ವಾತಾವರಣವನ್ನು ಸೃಷ್ಟಿ ಮಾಡಿದರು: 'ನೀನಿದ್ದೇನು ಪ್ರಯೋಜನ? ನಾನಂತೂ ಪ್ರಾಪಂಚಿಕತೆಯಲ್ಲಿ ತೊಳಲುತ್ತಿದ್ದೇನೆ. ನನಗೇನೂ ಸಿದ್ಧಿಸಲಿಲ್ಲ', ಎಂದೆಲ್ಲ ಆರ್ಭಟಿಸತೊಡಗಿದರು. ಈ ದೃಶ್ಯವನ್ನು ನೋಡುತ್ತ ನಾವು ಕಂಪಿಸತೊಡಗಿದೆವು. ಆರಂಭದಲ್ಲಿ ಶ್ರೀಮಾತೆಯವರೂ ಸ್ವಲ್ಪ ಹೆದರಿದಂತೆ ಕಂಡು ಬಂದರು. ಆದರೆ ಅವರು ಶಾಂತರಾಗಿಯೂ ದೃಢವಾಗಿಯೂ (ಅವರು ತಮ್ಮ ಮುಖದ ಮೇಲೆ ಸೆರಗನ್ನು ಹಾಕಿಕೊಂಡಿದ್ದರು) ಒಂದೆರಡು ಮಾತುಗಳನ್ನು ಹೇಳಿದರು: ''ಮಗು, ಠಾಕೂರರು ನಿನ್ನನ್ನು ಸ್ವೀಕರಿಸಿರುವರು. ನಿನಗೇಕೆ ಭಯ? ನೀನು ಸಂಸಾರವನ್ನೇಕೆ ತೊರೆಯಬೇಕು? ನೀನು ಸರಿಯಾಗಿಯೇ ಮಾಡುತ್ತಿರುವೆ. ಎಷ್ಟು ಜನರಿಗೆ ನಿನ್ನಿಂದ ಉಪಕಾರವಾಗುತ್ತದೆ.'' ಅವರು ಹೀಗೆನ್ನುತ್ತಲೆ ಗಿರೀಶಬಾಬು ತಣ್ಣಗಾದರು. ಅವರು ಶಾಂತರಾಗಿ ಶ್ರೀಮಾತೆಯವರಿಂದ ಬೀಳ್ಕೊಂಡರು. ಮತ್ತೆ ಅವರು ಎರಡು-ಮೂರು ದಿನಗಳು ಗಂಭೀರರಾಗಿದ್ದರು; ಬೇರೊಂದು ಭಾವದಲ್ಲಿದ್ದರು. ನಂತರ ಎಂದಿನಂತೆಯೇ ತಮಾಷೆ ಮೋಜುಗಳನ್ನಾರಂಭಿಸಿದರು. ಶ್ರೀಮಾತೆಯವರನ್ನು ನಿಂದಿಸುವಾಗಲೂ ಬಾಲಕನ ಭಾವ - ಮಕ್ಕಳು ತಾಯಿಗೆ ತಮ್ಮ ಕೋಪವನ್ನು ತೋರುವಂತೆ, ಅವರು ಶ್ರೀಮಾತೆಯವರನ್ನು ನಿಂದಿಸಿದ್ದರು.

ಸ್ವಾಮೀಜಿಯವರನ್ನು ನಾನು ಮೊದಲು ಕಂಡದ್ದು ಆಲಂಬಜಾರಿನಲ್ಲಿ. ಅವರ ಮುಖಮಂಡಲ ಹಾಗು ಶರೀರದಿಂದ ಶಕ್ತಿಯೊಂದು ಪ್ರಕಟಗೊಳ್ಳುತ್ತಿದಂತೆ ಭಾಸವಾಗುತ್ತಿತ್ತು. ಮುಖಮಂಡಲವು ಜ್ಯೋತಿರ್ಮಯವಾಗಿದ್ದು ಕಣ್ಣುಗಳು ತೇಜಃಪುಂಜವಾಗಿದ್ದವು. ಹಾಸ್ಯ ಮಾಡುತ್ತಿದ್ದರೂ ಅಂತರ್ಯದಲ್ಲಿ ಅಗ್ನಿಯು ಅಡಕವಾಗಿದೆಯೆಂದು ನೋಡಿದರೆ ತಿಳಿಯುತ್ತಿತ್ತು. ಒಂದು ದಿನ ಸಂಜೆ ಅವರು ಮಾಳಿಗೆಯಲ್ಲಿ ನಡೆದಾಡುತ್ತಿದ್ದುದನ್ನು ಕಂಡೆ. ಇಡೀ ಪ್ರಪಂಚವೇ ಅವರ ಪದತಲದಲ್ಲಿರುವಂತೆ ನನಗೆ ತೋರಿತು. ಪೃಥ್ವಿಯೇ ಅವರ ವೀರದರ್ಪವನ್ನು ಕಂಡು ಕಂಪಿಸುತ್ತಿದ್ದಂತೆ ಭಾಸವಾಗುತ್ತಿತ್ತು.



ಆಲಂಬಜಾರಿನ ಮಠದಲ್ಲಿ ಅನೇಕ ವೇಳೆ ಸ್ವಾಮೀಜಿ ತಾವು ತೊಟ್ಟಿದ್ದ ವಸ್ತ್ರಗಳನ್ನು ತೊರೆದು ಬರಿಯ ಕೌಪೀನಧಾರಿಗಳಾಗಿರುತ್ತಿದ್ದರು. 'ಇವನ್ನು ಕಿತ್ತು ಬಿಸಾಡಿ ನಾನು ಬದುಕಿಕೊಂಡೆ' ಎನ್ನುತ್ತಿದ್ದರು. ಆಲಂಬಜಾರಿನಲ್ಲಿ ಅವರ ಸರಳ ಜೀವನವನ್ನು ಕಂಡರೆ ಅವರು ಪಾಶ್ಚಾತ್ಯ ದೇಶಗಳನ್ನು ಸುತ್ತಿ ಬಂದವರೆಂದು ಅನ್ನಿಸುತ್ತಿರಲಿಲ್ಲ. ಅಲ್ಲಿನ ಐಶ್ವರ್ಯ, ಹೆಸರು-ಕೀರ್ತಿ, ವಿಲಾಸಗಳನ್ನು ಅವರ ಮೇಲೆ ಹೇರಲಾಗಿದ್ದು ಅವುಗಳನ್ನು ಪರಿತ್ಯಜಿಸಿ ನಿಟ್ಟುಸಿರು ಬಿಟ್ಟು ಬಚಾವಾದರೆಂಬ ಭಾವ ಅವರಲ್ಲಿತ್ತು.

ಬೇಲೂರು ಮಠವನ್ನು ಸ್ಥಾಪಿಸಿದಾಗ, ಲಾಟು ಮಹಾರಾಜರು ಮಠದಲ್ಲಿರಲು ಇಷ್ಟಪಡುತ್ತಿರಲಿಲ್ಲ. ಹಗಲು ಹೊತ್ತು ಮಠಕ್ಕೆ ಬಂದರೂ ರಾತ್ರಿ ಹೊರಟುಹೋಗುತ್ತಿದ್ದರು. ''ಸಾಧುಗಳಿಗೆ ವಾಸಿಸಲು ಇಷ್ಟೊಂದು ಮನೆಗಳೇಕೆ?'' ಎನ್ನುತ್ತಿದ್ದರು.

ಸ್ವಾಮೀಜಿ ಮಾಯಾವತಿಯಲ್ಲಿದ್ದಾಗ ಬಾಬುರಾಮ ಮಹಾರಾಜರು ಅವರಿಗೊಂದು ಪತ್ರ ಬರೆದರು. ಅದರಲ್ಲಿ ಹೀಗೆ ಬರೆಯಲಾಗಿತ್ತು - 'ಮಳೆಗಾಲದಲ್ಲಿ ಮಠದ ಮೆಟ್ಟಿಲುಗಳನ್ನು ಹತ್ತಿ ಮಂದಿರದಲ್ಲಿ ನೈವೇದ್ಯವನ್ನರ್ಪಿಸಿ ಅದನ್ನು ಹಿಂದಕ್ಕೆ ತರುವುದು ಕಷ್ಟವಾಗುತ್ತದೆ. ಆದ್ದರಿಂದ ಅಲ್ಲಿ ಕಬ್ಬಿಣದ ಹೆಂಚುಗಳ ಮಾಡು ಮಾಡಿಸಿದರೆ ಒಳ್ಳೆಯದು.' ಇದರಿಂದ ಕೋಪಗೊಂಡ ಸ್ವಾಮೀಜಿ ಬಾಬುರಾಮ ಮಹಾರಾಜರನ್ನು ದೂಷಿಸಿದರು ಹಾಗೂ ಅವರನ್ನು ಆಕ್ಷೇಪಿಸುತ್ತ ಪ್ರತ್ಯುತ್ತರ ಬರೆದರು.

ಸ್ವಾಮೀಜಿ ಕಲ್ಕತ್ತೆಗೆ ಹಿಂದಿರುಗುವ ಹಾದಿಯಲ್ಲಿ ಡಾಕ್ ಬಂಗಲೆಯಲ್ಲಿ ಒಂದು ರಾತ್ರಿ ತಂಗಿದ್ದರು. ಅಲ್ಲಿ ಬಹುಶಃ ಅವರಿಗೆ ತಾವು ಬಾಬುರಾಮ ಮಹಾರಾಜರನ್ನು ದೂಷಿಸಿದ್ದು ನೆನಪಾಗಿರಬೇಕು. ಮಾತಿನ ನಡುವೆ ಅವರು, 'ಠಾಕೂರರ ಪ್ರಶಂಸೆ ಮಾಡಿದವರಲ್ಲಿ ನಾನು ದೋಷಗಳನ್ನು ಕಂಡರೆ ಅದು ನನ್ನ ದೃಷ್ಟಿದೋಷವೆ ಸರಿ' ಎನ್ನುತ್ತ ಸ್ವಾಮೀಜಿ ಉತ್ತೇಜಿತರಾದರು. ಪದೇ ಪದೇ, ಕಡೆಯ ಪಕ್ಷ ಮೂವತ್ತು ಸಲವಾದರೂ ಹೇಳಿದ್ದರು – 'ನನ್ನ ಅಂತರ್ಯದಿಂದ ನಾನು ನಿಮಗೆ ವಿಧೇಯ. ನಾನು ನೂರು ತಪ್ಪುಗಳನ್ನು ಮಾಡಿದರೂ, ಇವರು ನನ್ನನ್ನು ತೊರೆಯುವುದಿಲ್ಲ, ಇದಂತೂ ಖಂಡಿತ.'

ಪಿಲಿಭಿತ್ ಸ್ಟೇಷನ್ನಿನಲ್ಲಿ ಸ್ವಾಮೀಜಿಗಾಗಿ ದ್ವಿತೀಯ ದರ್ಜೆಯ ಟಿಕೇಟು ಖರೀದಿಸಲಾಯಿತು. ರೈಲಿನಲ್ಲಿ ದ್ವಿತೀಯ ದರ್ಜೆಯ ಎರಡು ಬೋಗಿಗಳಿದ್ದವು; ಒಂದು ಬೋಗಿ ತುಂಬಿತ್ತು; ಮತ್ತೊಂದರಲ್ಲಿ ಒಬ್ಬ ಮಿಲಿಟರಿ ಆಫೀಸರ್–ಕರ್ನಲ್ ಮಾತ್ರವೇ ಇದ್ದರು. ಕಾಳಿಕೃಷ್ಣ ಮಹಾರಾಜ್ ಹಾಗೂ ಗುಪ್ತ ಮಹಾರಾಜರು ಕರ್ನಲ್‌ನ ಬೋಗಿಯಲ್ಲಿ ಸ್ವಾಮೀಜಿಯವರ ಸಾಮಾನುಗಳನ್ನಿರಿಸಿದರು. ಕರ್ನಲ್ ಇದಕ್ಕೆ ಒಪ್ಪಲಿಲ್ಲ; ಆಗವರು ಪ್ಲಾಟ್ ಫಾರಂನಲ್ಲಿ ನಡೆದಾಡುತ್ತಿದ್ದ ಸ್ವಾಮೀಜಿಯವರನ್ನು ಗಮನಿಸಿರಲಿಲ್ಲ. ವ್ಯಕ್ತಿ ಬಹಳ ಗಟ್ಟಿಮುಟ್ಟಾಗಿದ್ದುದನ್ನು ಕಂಡ ಕರ್ನಲ್ ಮಾತನಾಡದೆ, ಸ್ವಾಮೀಜಿಗಾಗಿ ಬೇರೆಡೆ ವ್ಯವಸ್ಥೆ ಮಾಡಲು ಸ್ಟೇಷನ್ ಮಾಸ್ಟರಿಗೆ ಹೇಳಿದರು. ಈ ನಡುವೆ ಸ್ವಾಮೀಜಿ ರೈಲು ಹತ್ತಿದರು. ಸ್ಟೇಷನ್ ಮಾಸ್ಟರ್ ಸ್ವಾಮೀಜಿಯವರಿಗೆ ಬೇರೆ ಕಂಪಾರ್ಟ್‌ಮೆಂಟಿಗೆ ಹೋಗಲು ಹೇಳಿದಾಗ, ಸ್ವಾಮೀಜಿ ಕಿಡಿಕಿಡಿಯಾದರು. 'ಹೀಗೆ ಹೇಳಲು ನಿನಗೆಷ್ಟು ಧೈರ್ಯ? ನಿನ್ನ ಹೆಸರು ಹಾಗೂ ನಂಬರ್ ಬರೆದುಕೊಡು' ಎಂದು ಅವರು ಹೇಳಿದಾಗ ಭಯಭೀತನಾಗಿ ಅಲ್ಲಿಂದ ಹೊರಟುಹೋದ ಸ್ಟೇಷನ್ ಮಾಸ್ಟರ್ ಮತ್ತೆ ಎಲ್ಲೂ ಕಾಣಿಸಲಿಲ್ಲ! ಬೇರಾವ ಉಪಾಯವೂ ಕಾಣದೆ ಕರ್ನಲ್ ಸ್ವಾಮೀಜಿಯ ಕಂಪಾರ್ಟ್‌ಮೆಂಟ್‌ನಲ್ಲೆ ಕುಳಿತರು.

ಬಲರಾಮ ಬಸುರ ಮನೆಯಲ್ಲಿ ಸ್ವಾಮೀಜಿಯವರು ಕಾಳಿಕೃಷ್ಣ ಮಹಾರಾಜರಿಗೆ ಢಾಕಾಗೆ ಹೋಗಿ ಪ್ರಚಾರಕಾರ್ಯವನ್ನು ಆರಂಭಿಸಲು ಆಜ್ಞಾಪಿಸಿದರು. ಕಾಳಿಕೃಷ್ಣ ಮಹಾರಾಜರು ಅದಕ್ಕೊಪ್ಪಲಿಲ್ಲ. ''ನಮಗೆ ಲಕ್ಷ್ಯ ಪ್ರಾಪ್ತಿಯೇನೂ ಆಗಿಲ್ಲ. ನಾವೇನು ಪ್ರಚಾರ ಮಾಡುವುದು?'' ಮೊದಲು ಧ್ಯಾನ–ಭಜನೆಗಳನ್ನು ಮಾಡಿ ಸ್ವಲ್ಪ ಸಿದ್ಧಿಯನ್ನು ಪಡೆದು ತದನಂತರ ಪ್ರಚಾರ ಮಾಡಬಹುದೆಂದು ಭಾವನೆ ಅವರದು. ಸ್ವಾಮೀಜಿ ಉತ್ತೇಜಿತರಾಗಿ ಹೇಳಿದರು, ''ಯಾವನು ಸ್ವಂತ ಮುಕ್ತಿಗಾಗಿ ವ್ಯಗ್ರನಾಗುವನೋ ಅವನು ನರಕಕ್ಕೆ ಹೋಗುವನು, ಯಾವನು ತನ್ನ ಮುಕ್ತಿಯ ಬಗ್ಗೆ ಭಾವಿಸದೆ ಇತರರ ಮುಕ್ತಿಯನ್ನು ಚಿಂತಿಸುವನೋ ಅವನು ಮುಕ್ತಿಯ ಪಥದಲ್ಲಿ ಸರಸರನೆ ಮುಂದುವರಿಯುತ್ತಾನೆ.' ಹೀಗೆ ಸ್ವಾಮೀಜಿ ಆರ್ಭಟಿಸುತ್ತ ವರಾಂಡದಲ್ಲಿ ಅತ್ತಿಂದಿತ್ತ, ಇತ್ತಿಂದತ್ತ ಓಡಾಡಲಾರಂಭಿಸಿದರು.

ಅನೇಕ ವೇಳೆ ಸ್ವಾಮಿಜಿ ಯಾವುದೋ ಪೂರ್ವಸೂಚನೆ ಪಡೆದಿರುವಂತೆ, ಕೆಲವು ಕಾರ್ಯಗಳನ್ನು ಯಾವ ಮುನ್ಸೂಚನೆಯನ್ನೂ ನೀಡದೆ ಹಠಾತ್ತನೆ ಮಾಡುತ್ತಿದ್ದರು. ಈಜಿಪ್ಟ್‌ನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಒಮ್ಮೆ ಇದ್ದಕ್ಕಿದ್ದಂತೆ ಮಿಸ್ ಮ್ಯಾಕ್ಲೌಡ್‌ಗೆ ಹೇಳಿದರು, ''ನಾನು ಭಾರತಕ್ಕೆ ಹಿಂದಿರುಗಬೇಕು. ಆದಷ್ಟು ಬೇಗನೆ ಹಡಗಿನಲ್ಲಿ ಸ್ಥಳವನ್ನು ಕಾದಿರಿಸಿ.'' ತಮ್ಮ ಅಧಿಕಾರವನ್ನು ಉಪಯೋಗಿಸಿ ಮಿಸ್ ಮ್ಯಾಕ್ಲೌಡ್ ಒಂದು ಬರ್ತ್ ಗೊತ್ತು ಮಾಡಿದರು. ಅದೇ ಸಮಯ ಸ್ವಾಮೀಜಿ ಭಾರತಕ್ಕೆ ಬರಬೇಕಾಗಿತ್ತು – ಕ್ಯಾಪ್ಟನ್ ಸೇವಿಯರ್ ನಿಧನರಾಗಿದ್ದರು.

ಲಾಟು ಮಹಾರಾಜರು ಅನೇಕ ವೇಳೆ ಮಲಗಿಯೇ ಜಪ ಧ್ಯಾನಗಳನ್ನು ಮಾಡುತ್ತಿದ್ದರು. ನೋಡುವವರಿಗೆ ಅವರು ಮಲಗಿದಂತೆ ತೋರುತ್ತಿದ್ದರೂ, ವಾಸ್ತವವಾಗಿ ಅವರು ಜಪ, ಧ್ಯಾನ ಮಾಡುತ್ತಿದ್ದರು.

ಒಮ್ಮೆ ಸ್ವಾಮೀಜಿ ಬ್ರಹ್ಮಾನಂದರನ್ನು ಹೂಗಳಿಂದ ಪೂಜಿಸಿದರು – 'ಗುರುವತ್ ಗುರುಪುತ್ರೇಷು.' ಮಹಾರಾಜರು ಸ್ಥಿರವಾಗಿ ಕುಳಿತು ಪೂಜೆಯನ್ನು ಸ್ವೀಕರಿಸಿದರು.

ಮಹಾರಾಜರ ಕುರಿತು ಹರಿ ಮಹಾರಾಜರು ಹೇಳುತ್ತಾರೆ– ''ಅವರು ಒಂದು ನಿಮಿಷದಲ್ಲಿ ಪರಿಸರವನ್ನು ಬದಲಾಯಿಸಬಲ್ಲವರಾಗಿದ್ದರು. ಅವರ ಸುತ್ತಮುತ್ತಲಿನ ಸ್ವಲ್ಪ ಪ್ರದೇಶದಲ್ಲಿ ಅವರ ಇಚ್ಛಾನುಸಾರ ಜನರು ವರ್ತಿಸುವಂತೆ ಮಾಡುವ ಶಕ್ತಿ ಅವರಿಗಿತ್ತು. ಅವರು ಧ್ಯಾನ ಜಪದಲ್ಲಿ ತೊಡಗಿದ್ದರೆ ಇತರರೂ ಧ್ಯಾನ ಮಾಡುತ್ತಿದ್ದರು; ಅವರು ನಕ್ಕರೆ ಇತರರೂ ನಗುವರು, ಅವರು ಮಾತನಾಡಿದರೆ ಇತರರಲ್ಲೂ ಮಾತನಾಡುವ ಪ್ರವೃತ್ತಿ ಉಂಟಾಗುತ್ತಿತ್ತು.''

ಒಂದು ದಿನ ಸುಪ್ರಸಿದ್ಧ ಲೇಖಕರಾದ ದೇವೇನ್ ಬಸು ಮಹಾರಾಜರ ಬಳಿ ಹೋದರು. ಮಹಾರಾಜರ ಮೇಲೆ ಅವರಿಗೆ ಶ್ರದ್ಧೆಯೂ ಇರಲಿಲ್ಲ, ಅವರ ಆಧ್ಯಾತ್ಮಿಕತೆಯ ಬಗ್ಗೆ ಅವರಿಗೆ ತಿಳಿದೂ ಇರಲಿಲ್ಲ. ನಂತರದ ಕಾಲದಲ್ಲಿ ದೇವೇನ್ ಬಾಬು ಕೌಟುಂಬಿಕ ಸಮಸ್ಯೆಗಳಿಂದ ಬಳಲಿದರು. ಆಗ ಅವರು ಒಂದು ದಿನ ಮಹಾರಾಜರ ಬಳಿ ಸಾರಿದರು. ಮಹಾರಾಜರು ಸ್ವಯಂ ಪ್ರೇರಿತರಾಗಿ ಅವರ ವಕ್ಷಸ್ಥಳವನ್ನು ತೀಡಿದರು. ಆಗ ಅವರ ಮನದ ಅಶಾಂತಿ ದೂರವಾಯಿತು. ಆ ಬಳಿಕ ಅವರು ಮಹಾರಾಜರ ಪರಮಭಕ್ತರಾದರು. ಈ ಘಟನೆ ಬೇಲೂರು ಮಠದ ಮಹಡಿಯಲ್ಲಿದ್ದ ಮಹಾರಾಜರ ಕೋಣೆಯಲ್ಲಿ ನಡೆದಿತ್ತು.

*(ಮುಂದುವರಿಯುವುದು)*